ವಿಷಯ : -ಹತ್ತಿ ಬೆಲೆಯ ನಿಗದಿ ಕುರಿತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 134(404)

ಶ್ರೀ ಶಿವಾನಂದ ಎಚ್. ಕೌಜಲಗಿ(ಬೈಲಹೊಂಗಲ) :

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ)ಬೇರೆ ಬೆಳೆಗಳಿಗೆ ಮುಂಚಿತವಾಗಿ ಬೆಲೆಗಳನ್ನು ಸರ್ಕಾರದವರು ನಿಗದಿಪಡಿಸಿದಂತೆ ಹತ್ತಿ ಬೆಳೆಗೂ ಸಹ ಮುಂಗಡವಾಗಿ ಬೆಲೆಯನ್ನು ನಿಗದಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಆ)ರಾಜ್ಯದಲ್ಲಿ ಬೆಳೆದ ಹತ್ತಿಯನ್ನು ಹೋದ ವರ್ಷ ಹತ್ತಿ ಬೆಲೆ ಬಹಳ ಕಡಿಮೆಯಾಗಿದ್ದು ಅದರಿಂದ ರೈತರಿಗೆ ತುಂಬಾ ಹಾನಿಯಾಗಿದ್ದು ನಿಜವೆ? ಅದನ್ನು ತಪ್ಪಿಸಲು ಈ ವರ್ಷ ಮುಂಜಾಗ್ರತೆಯಾಗಿ ಸಿಸಿಐ ಹಾಗೂ ಫೆಡರೇಶನ್ ಮತ್ತು ನೂಲಿನ ಮಹಾಮಂಡಳಿಗಳ ಮುಖಾಂತರ ಸರ್ಕಾರದವರು ಮಾತನಾಡಿ ರಾಜ್ಯದಲ್ಲಿ ಬೆಳೆದ ಹತ್ತಿಯನ್ನು ಯೋಗ್ಯ ಬೆಲೆಗೆ ಖರೀದಿಯಾಗುವಂತೆ ಮಾಡಲು ಕ್ರಮ ಕೈಗೊಳ್ಳುವರೆ?

ಇ)ಹಾಗಿದ್ದಲ್ಲಿ ಕೈಗೊಳ್ಳಲಾಗುವ ಕ್ರಮಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ(ಕೃಷಿ ಸಚಿವರು) : -

ಹೌದು, ಇತರೆ ಬೆಳೆಗಳಿಗೆ ಬೆಂಬಲ ಬೆಲೆಯನ್ನು ನಿಗದಿಪಡಿಸಿದಂತೆ, ಕೇಂದ್ರ ಸರ್ಕಾರದಿಂದಲೇ ಹತ್ತಿಗೂ ಸಹ ಬೆಂಬಲ ಬೆಲೆಯನ್ನು ನಿಗದಿಪಡಿಸಲಾಗುವುದು.

ಹೋದ ವರ್ಷ ಅಂದರೆ 1992-93ರಲ್ಲಿ ಹತ್ತಿ ಬೆಲೆ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ರಾಜ್ಯದಲ್ಲಿ ಬೆಳೆದ ಹತ್ತಿಯನ್ನು ಯೋಗ್ಯ ಬೆಲೆಗೆ ಖರೀದಿಯಾಗುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ರಾಜ್ಯದಲ್ಲಿ ಬೆಳೆದ ಹೆಚ್ಚು ಹತ್ತಿಯನ್ನು ಖರೀದಿಸುವಂತೆ ಹಾಗೂ ಸಿಸಿಐ ಹಾಗೂ ಮಾರ್ಕೆಟಿಂಗ್ ಫೆಡರೇಶನ್ ನೂಲಿನ ಮಹಾ ಮಂಡಳಿ ಅಧಿಕಾರಿಗಳ ಸಭೆಯನ್ನು 2-1-1993ರಂದು ಕೃಷಿ ಕಾರ್ಯದರ್ಶಿಗಳವರ ಅಧ್ಯಕ್ಷತೆಯಲ್ಲಿ ಕರೆದು ಹೆಚ್ಚು ಹತ್ತಿಯನ್ನು ಖರೀದಿ ಮಾಡುವಂತೆ ಒತ್ತಾಯಿಸಲಾಗಿದೆ. ಇದಲ್ಲದೆ 11-3-93ರಂದು ಹಾಗೂ 20-3-93ರಂದು ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಸಿ.ಸಿ.ಐ ಇವರಿಗೆ ಪತ್ರ ಮತ್ತು ಟೆಲೆಕ್ಸನ್ನು ಕಳುಹಿಸಿ, ಹತ್ತಿಯನ್ನು ರಾಜ್ಯದಲ್ಲಿ ಖರೀದಿಸಲು ಕೋರಲಾಗಿದೆ. ಇದೇ ರೀತಿ ಈ ಸಾಲಿನಲ್ಲಿ ಬೆಳೆದ ಹತ್ತಿಯನ್ನು ಖರೀದಿಸುವ ಸಲುವಾಗಿ ಒಂದು ಸಭೆಯನ್ನು ಕರೆದು ಅವರೊಡನೆ ಚರ್ಚಿಸಿ ಬೆಳೆದ ಹತ್ತಿಯನ್ನು ಕೊಳ್ಳಲು ವ್ಯವಸ್ಥೆ ಮಾಡಲಾಗುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ: -ಸನ್ಮಾನ್ಯ ಅಧ್ಯಕ್ಷರೇ, ಹೋದ ವರ್ಷ ಕರ್ನಾಟಕ ರಾಜ್ಯದಲ್ಲಿ ಹತ್ತಿಯ ಬೆಲೆ ಬಹಳ ಕಡಿಮೆಯಾಗಿತ್ತು. ಆ ಕಾಲಕ್ಕೆ ನಾನು ವಿಧಾನಸಭೆಯಲ್ಲಿ ಪ್ರಸ್ತಾಪಮಾಡಿದ್ದೆ. ತಾವು ಕೂಡಲೇ ಸಿಸಿಐ ಫೆಡರೇಷನ್ ಮತ್ತು ಖಾದಿ ಬೋರ್ಡ್ ಕೂಡಿಕೊಂಡು ಹತ್ತಿಯನ್ನು ಖರೀದಿ ಮಾಡಬೇಕು ಎಂದು ತಿಳಿದುಕೊಂಡು ಆದರ ಬಗ್ಗೆ ವಚನ ಕೊಟ್ಟಿದ್ದಿರಿ. ಈ ವರ್ಷ ಹೊಸದಾಗಿ ಪ್ರಾರಂಭವಾಯಿತು. ಇದರ ಸಲುವಾಗಿ ಸ್ವತಃ ತಾವು ಹೋಗಿ ಕೃಷಿ ಮಂತ್ರಿಗಳನ್ನು ಅಥವಾ ಜವಳಿ ಮಂತ್ರಿಗಳನ್ನು ಭೇಟಿಯಾಗಿ ಈ ವರ್ಷ ರಾಜ್ಯದಲ್ಲಿ ಎಷ್ಟು ಹತ್ತಿಯನ್ನು ಸಿಸಿಐನವರು ಖರೀದಿ

ಮಾಡುತ್ತಾರೆ ಎಂಬುದನ್ನು ತಾವು ನಿಗದಿಪಡಿಸಿಕೊಂಡು ಬಂದಿದ್ದೀರೋ ಹೇಗೆ? ಎರಡನೆಯದಾಗಿ ಇದರ ಬಗ್ಗೆ ಶಾಸಕರ ಆ ಸಮಿತಿಯನ್ನು ನೇಮಿಸುತ್ತೇವೆ ಎಂದು ಹೇಳಿ ವಚನ ಕೊಟ್ಟಿದ್ದೀರಿ? ಆ ಪ್ರಕಾರ ಆ ಸಮಿತಿಯನ್ನು ನೇಮಿಸಲು ಯಾವ ಕ್ರಮ ತೆಗೆದುಕೊಂಡಿದ್ದೀರಿ? ಮತ್ತು ಈ ವರ್ಷ ರಾಜ್ಯದಲ್ಲಿ ಎಷ್ಟು ಹತ್ತಿ ಇದೆ? ಅದರ ಸಲುವಾಗಿ ಹೋದ ವರ್ಷ ಎಷ್ಟಿತ್ತು? ಇದರ ಬಗ್ಗೆ ತಾವೇನಾದರೂ ತನಿಖೆ ಮಾಡಿದ್ದೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚುಮಾಸ್ತಿಗೌಡ : -ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಹತ್ತಿ ಬೆಲೆ ತೀರಾ ಬಿದ್ದು ಹೋಗಿತ್ತು. ಅಷ್ಟು ಮಾತ್ರವಲ್ಲ, ಬೆಲೆಯಾಗದೇ ಸಾವಿರಾರು ಟನ್ ಹತ್ತಿ ಇಲ್ಲಿ ಕೆಟ್ಟು ಹೋಗಿರತಕ್ಕಂಥ ಪರಿಸ್ಥಿತಿಗೆ ಬಂದಿತ್ತು. ಅಂಥ ಸಂದರ್ಭದಲ್ಲಿ ಕೇಂದ್ರದ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ ಮೇಲೆ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಹತ್ತಿಯನ್ನು ವ್ಯಾಪಾರ ಮಾಡಿದ್ದರಿಂದ ರೈತರಿಗೆ ಬಹಳ ಮಟ್ಟಿಗೆ ಸಹಾಯವಾಯಿತು. ಈಗ ಮಾನ್ಯ ಸದಸ್ಯರು ಹೇಳುವ ಹಾಗೆ ಇದಕ್ಕೆ ಏನಾದರೂ ಖಾಯಂ ಪರಿಹಾರ ಮಾಡುವುದಕ್ಕೆ ಸಾಧ್ಯವೇ ಹಾಗೆ ಎಂದು ಯೋಚನೆ ಮಾಡಬೇಕಾದ್ದು ಅತ್ಯಗತ್ಯ ಎಂದು ನಾನು ಒಪ್ಪುತ್ತೇನೆ. ಇಲ್ಲಿ ಏನು ಆಗಿದೆ ಎಂದರೆ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಮನಸ್ಸು ಮಾಡಿ ಕೊಂಡುಕೊಳ್ಳಬಹುದು ಅಥವಾ ಕೊಂಡುಕೊಳ್ಳದೇನೇ ಇರಬಹುದು. ಜೊತೆಗೆ ಹತ್ತಿ ವ್ಯಾಪಾರ ಮಾಡತಕ್ಕವರ ಫೆಡರೇಷನ್ ಇದೆ. ಅವರನ್ನು ಕೇಳಿದರೆ ನಮ್ಮ ಹತ್ತಿರ ಹಣ ಇಲ್ಲ; ನೀವು ಇಷ್ಟು ಕೋಟಿ ರೂಪಾಯಿ ನಮಗೆ ಕೊಡಿಸಿಕೊಟ್ಟರೆ ನಾವು ವ್ಯಾಪಾರ ಮಾಡಬಹುದು ಎಂದು ಹೇಳಿದರು. ಆದರೆ ಅವರು ರೈತರಿಂದ ಕೊಂಡುಕೊಂಡರೂ ಸಹ ಅವರಿಂದ ಬೇರೆ ಯಾರು ಕೊಂಡುಕೊಳ್ಳವವರು ಎನ್ನುವ ಬಗ್ಗೆ ಸಾಕಷ್ಟು ಚರ್ಚೆ ಆಗಬೇಕಾಗಿದೆ. ಅವರೂ ಒಪ್ಪಬೇಕಾಗಿದೆ. ಇಷ್ಟೆಲ್ಲಾ ವ್ಯವಹಾರ ಇದೆ. ಆದ್ದರಿಂದ ಈ ವರ್ಷ ಮಾನ್ಯ ಸದಸ್ಯರು ಹೇಳುವ ಹಾಗೆ ಈ ಸಭೆಯಲ್ಲಿ ಅವರ ಜೊತೆಯಲ್ಲಿ ಹಾಗೂ ಹತ್ತಿ ಬೆಳೆಯತಕ್ಕ, ವ್ಯವಸಾಯಗಾರರನ್ನು ಅಥವಾ ವ್ಯಾಪಾರ ಮಾಡತಕ್ಕವರ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇನೆ. ಆ ಸಮಿತಿ ಮಾಡುವುದು ಅವಶ್ಯಕ ಎಂದು ನಾನು ಒಪ್ಪುತ್ತೇನೆ. ಆ ಸಮಿತಿ ಮಾಡುವುದಕ್ಕೆ ಆದಷ್ಟು ಬೇಗ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮತ್ತೆ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾಗೆ ಸಂಬಂಧಪಟ್ಟಂತಹ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡುವುದು ಅವಶ್ಯಕ ಎಂದು ಕಂಡು ಬಂದಾಗ ಆ ಕೆಲಸ ಮಾಡುತ್ತೇನೆ. ಇಷ್ಟು ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರ ಜೊತೆ ಜರೂರು ಬಿದ್ದರೆ ಹೋಗಿ ನಾವು ಭೇಟಿ ಆಗುತ್ತೇವೆ ಎಂದು ತಾನೇ ಹೇಳಿದಿರಿ. ಹತ್ತಿ ಬೆಳೆ 500ರಿಂದ 700 ರೂಪಾಯಿ ತನಕ ಆಯಿತು. ತಾವು ಇವತ್ತಿನ ದಿವಸ ವಿಚಾರ ಮಾಡಬಹುದು. ನಾವು ಆಗ ಹೇಳಿದ್ದೆವು, ಯಾವ ಪ್ರಕಾರ ರೇಷ್ಮೆ ಬೆಳೆ ಸ್ವಲ್ಪ ಕಡಿಮೆ ಆದಾಗ ಇಡೀ ವಿಧಾನ ಸೌಧದ ತುಂಬಾ ಹಳೇಮೈಸೂರಿನಲ್ಲಿ ರೇಷ್ಮೆ ಬೆಳೆ ಮುಖ್ಯ ಎಂದು ತಿಳಿದುಕೊಂಡು ಹೇಗೆ ಕ್ರಮಕ್ಕೆಗೊಳ್ಳುತ್ತೀರಿ, ಆ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ ಹತ್ತಿ ಬೆಳೆ ಮುಖ್ಯ ಎಂದುಕೊಂಡು ಸ್ವಲ್ಪ ವಿಚಾರ ಮಾಡಿ ಎಂದು ಹೇಳಿದರೆ ಸರ್ಕಾರದ ಕಣ್ಣು ತೆರೆದಿಲ್ಲ. ಈ ಸಲ ಕಣ್ಣು ತೆರೆಯಬಹುದು ಎಂದು ತಿಳಿದುಕೊಂಡರೆ ಇನ್ನೂ ಹೋಗುತ್ತೇವೆ, ಕೇಳುತ್ತೇವೆ ಮಾಡುತ್ತೇವೆ ಎಂದರೆ ನೀವು ಯಾವಾಗ ಮಾಡುವುದು? ಇನ್ನು ಒಂದು ತಿಂಗಳಿಗೆ ಹತ್ತಿ ಪೇಟೆಗೆ ಬರುತ್ತದೆ. ಎಷ್ಟು ಮಾರುಕಟ್ಟೆಗೆ ಬರುತ್ತದೆ, ಇಷ್ಟು ತೆಗೆದುಕೊಳ್ಳುತ್ತಾರೆ.

ಯಾವ ರೇಟ್‌ನಲ್ಲಿ ತೆಗೆದುಕೊಳ್ಳುತ್ತಾರೆ, ಇದಕ್ಕೆ ಸಪೋರ್ಟ್ ಪ್ರೈಸ್ ಕೊಡುತ್ತೀರಾ ಎಂಬುದರ ಬಗ್ಗೆ ಏನಾದರೂ ಗೊತ್ತಿರಬೇಕಲ್ಲಾ. ಇವತ್ತಿನ ದಿವಸ ಇಂತಹ ರೇಟಿಗೆ ಹತ್ತಿ ತೆಗೆದುಕೊಳ್ಳುತ್ತೇವೆ ಇಂತಹ ರೇಟಿಗೆ ನಾವು ಮಾರುತ್ತೇವೆ ಎಂದು ಹೇಳುವುದು ಅತಿ ಅಗತ್ಯ. ಇವತ್ತಿನ ದಿವಸ ಫೆಡರೇಷನ್‌ಗೆ ರೊಕ್ಕ ಕೊಟ್ಟರೆ ಮಾಡುತ್ತಾರೆ ಎಂದರೆ ಹೇಗೆ? ಸರ್ಕಾರದವರು ರೊಕ್ಕ ಕೊಡಬೇಕು. ಏಕೆ ಕೊಡಬಾರದು? ಇವತ್ತಿನ ದಿವಸ ನೀವು ಅವರಿಗೆ ಐದು ಕೋಟಿ ರೂಪಾಯಿ ಕೊಡವುದಕ್ಕೆ ಆಗಲಿಲ್ಲ. ಅದರಿಂದ ಫೆಡರೇಷನ್‌ನಿಂದ ಹೆಚ್ಚಿಗೆ ಪರ್ಚೇಸ್ ಮಾಡುವುದಕ್ಕೆ ಆಗಲಿಲ್ಲ. ಅವರ ಕಡೆಯಿಂದ ರೊಕ್ಕ ಇಲ್ಲ ಎಂದರೆ ಹೇಗೆ ಪರ್ಚೇಸ್ ಮಾಡುತ್ತಾರೆ? ಆದ ಕಾರಣ ತುರ್ತು ಕ್ರಮ ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ಹೇಳಬೇಕು. ಇವತ್ತಿನ ದಿವಸ ಇದು ಕೋಟ್ಯಾಂತರ ರೈತರಿಗೆ ಅನ್ಯಾಯ ಮಾಡುವಂತಹದು ಆಗಿದೆ. ನೀವು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈ ಅಧಿವೇಶನ ಮುಗಿಯುವುದರೊಳಗೆ ಹತ್ತಿ ಬೆಳೆಗಾರರ, ಒಂದು ಸಭೆಯನ್ನು ಕರೆದು ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಫೆಡರೇಷನ್‌ನವರಿಂದ ಏನಾದರೂ ಸಹಾಯ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲಿಸುತ್ತೇನೆ. ಹಾಗೇನಾದರೂ ಸಾಧ್ಯ ಆಗದೇ ಇದ್ದರೆ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಅವರ ಬೆಂಬಲವನ್ನು ತೆಗೆದುಕೊಂಡು ಇದನ್ನು ಮಾಡಬೇಕಾಗುತ್ತದೆ. ಇದು ಅಷ್ಟು ಸುಲಭ ಅಲ್ಲ ; ಈಗ ಏನೂ ಹೇಳುವುದಕ್ಕೆ ಆಗುವುದಿಲ್ಲ. ನಮ್ಮ ಸ್ನೇಹಿತರ ಜೊತೆ ಸಮಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸರ್ಕಾರದವರು ಫೆಡರೇಷನ್‌ನವರಿಗೆ ದುಡ್ಡು ಕೊಟ್ಟರೆ ಫೆಡರೇಷನ್‌ನವರು ಖರೀದಿ ಮಾಡುವುದಕ್ಕೆ ತಯಾರಿದ್ದಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಹತ್ತಿಯನ್ನು ಯಾವ ರೀತಿ ಖರೀದಿ ಮಾಡುತ್ತಾರೆ ಎಂಬುದನ್ನು ಮೊದಲು ಹೇಳಬೇಕು. ಏಕೆಂದರೆ 700ರಿಂದ 2500ರವರೆಗೆ ಹತ್ತಿ ಧಾರಣೆ ಎಂದು ಹೇಳುತ್ತೀರಿ. ವರ್ಗೀಕರಣ ಯಾವ ರೀತಿ ಮಾಡುತ್ತಾರೆ ಎಂಬುದನ್ನು ಹೇಳಬೇಕು. ಯಾವ ಪೇಟೆಯೊಳಗೂ ಸ್ಪೇಪಲ್ ಲೆಂಗ್ತ್ ಮೇಲೆ ಖರೀದಿ ಮಾಡುವಂತಹ ಪದ್ಧತಿ ಇಲ್ಲ. 700-800 ರೂ.ಗಳಿಗೆ ಖರೀದಿ ಮಾಡುತ್ತಾರೆ. ಇದಕ್ಕೆ ಏನಾದರೂ ಪರಿಹಾರ ಹೇಳುತ್ತೀರಾ? ಬೇಕೆಂತಲೇ ಖರೀದಿದಾರರು ಏನು ಮಾಡುತ್ತಾರೆಂದರೆ ಎರಡು ಅಡಿಗೆ ಮೂರು ಸಾವಿರ ರೇಟ್ ಹಾಕುತ್ತಾರೆ ; ಉಳಿದ ಸಾವಿರ ಅಡಿಗಳಿಗೆ 600 ರೂಪಾಯಿ ರೇಟ್ ಹಾಕುವ ಪದ್ಧತಿ ಇದೆ. ಗುಣಮಟ್ಟ ವರ್ಗೀಕರಣ ಮಾಡಿ ; ವರ್ಗೀಕರಣದ ಆಧಾರದ ಮೇಲೆ ಏನಾದರೂ ಖರೀದಿ ಮಾಡುವಂತಹ ಕಾನೂನು ಸರ್ಕಾರ ಮಾಡುತ್ತದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅವರು ಹೇಳಿದ ಕೂಡಲೇ ಈ ಪ್ರಶ್ನೆಗಳಿಗೆ ನೇರವಾಗಿ ಉತ್ತರ ಕೊಡುವ ಬದಲು ಹತ್ತಿ ಬೆಳೆಯತಕ್ಕ, ಹತ್ತಿ ವ್ಯವಸಾಯ ಮಾಡತಕ್ಕ ಸ್ನೇಹಿತರನ್ನು ಕರೆದು ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಈ ಅಧಿವೇಶನ ಪೂರ್ತಿ ಆಗುವುದರೊಳಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ : – ಚನ್ನಪಟ್ಟಣದಲ್ಲಿ ಭೂಸಾರ ಪರೀಕ್ಷಣಾ ಪ್ರಯೋಗಾಲಯ ತೆರೆಯುವ ಬಗ್ಗೆ.